# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1097 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 18-03-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಾಗಲಕೋಟೆ ಜಿಲ್ಲೆಯ ರಬಕವಿ ಮಹೀಷವಾಡಗಿ ಸೇತುವೆ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗಿದೆ; ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು; | ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ರಬಕವಿ-ಬನಹಟ್ಟಿ ರಸ್ತೆಯ ಮಹಿಷವಾಡಗಿ ಗ್ರಾಮದ ಹತ್ತಿರ ಕೃಷ್ಣಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿಯನ್ನು ರೂ.30.26 ಕೋಟಿಗಳ ಗುತ್ತಿಗೆ ಮೊತ್ತದಲ್ಲಿ ಕೈಗೆತ್ತಿಕೊಳ್ಳಲು ದಿನಾಂಕ:19.03.2018 ರಂದು ಕಾರ್ಯಾದೇಶ ನೀಡಲಾಗಿರುತ್ತದೆ. 2019ರಲ್ಲಿ ಉಂಟಾದ ಪ್ರವಾಹದ ಸಮಯದಲ್ಲಿ ನದಿಯಲ್ಲಿ ಹೆಚ್ಚಿನ ಮಟ್ಟಕ್ಕೆ ನೀರು ಹರಿದ ಪರಿಣಾಮ, ಸದರಿ ಹೆಚ್ಚಿನ ನೀರಿನ ಮಟ್ಟಕ್ಕೆ ಅನುಗುಣವಾಗಿ ಸೇತುವೆಯ ವಿನ್ಯಾಸವನ್ನು ಪರಿಷ್ಕರಿಸಿ ದಿನಾಂಕ:10.11.2019 ರಂದು ಕಾಮಗಾರಿ ಪ್ರಾರಂಭಿಸಲಾಗಿರುತ್ತದೆ. |
| ಆ) | ಸದರಿ ಮಹೀಷವಾಡಗಿ ಸೇತುವೆ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ ಸದರಿ ಕಾಮಾಗಾರಿಯು ಕಳೆದ 3-4 ವರ್ಷಗಳಿಂದ ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಯಾವ ಕಾರಣಕ್ಕಾಗಿ ಸ್ಥಗಿತಗೊಳಿಸಲಾಗಿದೆ; ಮತ್ತು ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ಬಂದಿರುತ್ತದೆ.<br>ಈ ಕೆಳಕಂಡ ಕಾರಣಗಳ ನಿಮಿತ್ತ ಸದರಿ ಸೇತುವೆ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು ವಿಳಂಬವಾಗಿರುತ್ತದೆ.<br>• ಸೇತುವೆ ನಿರ್ಮಾಣ ಕಾಮಗಾರಿಗೆ ಕಾರ್ಯಾದೇಶ ನೀಡಿದ ನಂತರದಲ್ಲಿ 2018ರ ವಿಧಾನಸಭಾ ಚುನಾವಣೆಗಳು ಘೋಷಣೆಯಾದ ಹಿನ್ನೆಲೆಯಲ್ಲಿ ನೀತಿ ಸಂಹಿತೆಯ ಕಾರಣದಿಂದ ಕೂಡಲೇ ಕಾಮಗಾರಿ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. |
| ಇ) | ಸದರಿ ಕಾಮಗಾರಿಯನ್ನು ಸರ್ಕಾರವು ತ್ವರಿತವಾಗಿ ಪೂರ್ಣಗೊಳಿಸಲು ಇರುವ ಅಡಚಣೆಗಳೇನು; ಈ ಕುರಿತು ಕೈಗೊಂಡ ಕ್ರಮಗಳೇನು; ವಿವರ ನೀಡುವುದು; | • 2019 ರ ಮಳೆಗಾಲದಲ್ಲಿ ಸೇತುವೆ ಕಾಮಗಾರಿಯ ಸ್ಥಳದಲ್ಲಿ ಅತಿಯಾದ ಮಳೆಯಿಂದಾಗಿ ನೀರಿನ ಮಟ್ಟ ಹೆಚ್ಚಾಗಿದ್ದುದರಿಂದ ಕಾಮಗಾರಿಯ ವಿಳಂಬಕ್ಕೆ ಕಾರಣವಾಗಿರುತ್ತದೆ.<br>• 2019 ರಲ್ಲಿ ಉಂಟಾದ ಪ್ರವಾಹದ ಸಮಯದಲ್ಲಿ ನದಿಯಲ್ಲಿ ಹೆಚ್ಚಿನ ಮಟ್ಟಕ್ಕೆ ನೀರು ಹರಿದ ಪರಿಣಾಮ, ಸದರಿ ಹೆಚ್ಚಿನ ಮಟ್ಟಕ್ಕೆ ಅನುಗುಣವಾಗಿ ಸೇತುವೆಯ ವಿನ್ಯಾಸವನ್ನು ಪರಿಷ್ಕರಿಸಲಾಗಿರುತ್ತದೆ. ಅದರಂತೆ ಪರಿಷ್ಕೃತ ನಕ್ಷೆಯನ್ವಯ 530.170 ಮೀ ರಿಂದ 533.786 ಮೀ ವರೆಗೆ ಏರಿಕೆಯಾದ ನೀರಿನ ಮಟ್ಟಕ್ಕೆ ತಕ್ಕಂತೆ 32.20 ಮೀಟರ್ ಉದ್ದದ 10 ಅಂಕಣಗಳಿಂದ 14 ಅಂಕಣಗಳಿಗೆ ಮರು ವಿನ್ಯಾಸಗೊಳಿಸಲಾಗಿರುತ್ತದೆ. ರಬಕವಿ ಕಡೆಯ ಕೂಡು ರಸ್ತೆಯ ಉದ್ದವು 115 ಮೀ ಹಾಗೂ ಮಹಿಷವಾಡಗಿ ಕಡೆಗೆ 88 ಮೀ ಹೆಚ್ಚಳವಾಗಿರುತ್ತದೆ.<br>• ಸದರಿ ಕಾಮಗಾರಿಯ ಅನುಮೋದಿತ ನಕ್ಷೆಯಂತೆ ಕಾಮಗಾರಿಯನ್ನು ಕೈಗೊಳ್ಳಲು ಸ್ಥಳೀಯ ರೈತರು ವಿರೋಧ ವ್ಯಕ್ತಪಡಿಸಿರುವುದರಿಂದ ಹಾಗೂ ವಿನ್ಯಾಸವನ್ನು 2019ರ |

| | | |
|---|---|---|
| | | ಪ್ರವಾಹದ ಮಟ್ಟವನ್ನು ಪರಿಗಣಿಸಿ ಮರು ವಿನ್ಯಾಸಗೊಳಿಸಿ ಕಾಮಗಾರಿ ಸ್ಥಳದಲ್ಲಿ ದಿನಾಂಕ:10.11.2019 ರಂದು ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ.<br>• ಸದರಿ ಕಾಮಗಾರಿಯನ್ನು ಕೈಗೊಳ್ಳಲು ನದಿಯ ಪಾತ್ರದಲ್ಲಿನ ನೀರಿನ ಮಟ್ಟ ಇಳಿಕೆಯಾಗದೇ ಇರುವುದರಿಂದ ನದಿ ಪಾತ್ರದಲ್ಲಿನ ಕಾಮಗಾರಿಯನ್ನು 2024 ರ ಮಳೆಗಾಲದ ನಂತರವೂ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ ಹಾಗೂ ಸೇತುವೆಯ ಬಾಕಿ 3 ತಳಪಾಯದ ಕಾಮಗಾರಿಗಳಿಗೆ ಜಮೀನುಗಳನ್ನು ಭೂಸ್ವಾಧೀನಪಡಿಸಬೇಕಾಗಿದ್ದು, ಮಾನ್ಯ ಜಿಲ್ಲಾಧಿಕಾರಿಗಳಿಂದ ನಿಗದಿಪಡಿಸಿದ ದರಗಳಿಗೆ ಭೂಮಾಲೀಕರು ಒಪ್ಪದೇ ಇರುವ ಕಾರಣ ಭೂಸ್ವಾಧೀನ ವಿಳಂಬವಾಗಿರುತ್ತದೆ.<br>• ಈ ಎಲ್ಲ ಕಾರಣಗಳಿಂದ ಕಾಮಗಾರಿಯು ಜೂನ್–2024 ರಲ್ಲಿ ಸ್ಥಗಿತಗೊಂಡಿರುತ್ತದೆ. ಬಾಕಿ ಕಾಮಗಾರಿಗೆ ಅಗತ್ಯವಿರುವ ಭೂಮಿಯನ್ನು ಕರ್ನಾಟಕ ರಾಜ್ಯ ಹೆದ್ದಾರಿ ಕಾಯ್ದೆ ಅಡಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಪ್ರಕ್ರಿಯೆ ಕೈಗೊಂಡಿದ್ದು, ಮಹಿಷವಾಡಗಿ ಕಡೆಯ 29 ಸರ್ವೆ ನಂಬರ್‌ಗಳ ಪೈಕಿ 21 ಸರ್ವೆ ನಂಬರ್‌ಗಳ ಭೂಮಾಲೀಕರಿಗೆ ಪರಿಹಾರ ವಿತರಿಸಲಾಗಿರುತ್ತದೆ. ಮದನಮಟ್ಟಿ ಕಡೆ ಭೂಮಾಲೀಕರಿಗೆ ಐತೀರ್ಮ ನೋಟೀಸ್‌ಗಳನ್ನು ಜಾರಿ ಮಾಡಲಾಗಿದ್ದು, ಭೂಪರಿಹಾರ ವಿತರಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಅದರಂತೆ, ಭೂಸ್ವಾಧೀನಪಡಿಸಿದ ಕ್ಷೇತ್ರದಲ್ಲಿನ ಬಾಕಿ 3 ತಳಪಾಯ ಕಾಮಗಾರಿಗಳನ್ನು ದಿನಾಂಕ:04.02.2026 ರಿಂದ ಪ್ರಾರಂಭಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಪ್ರಸ್ತುತ ಕಾಮಗಾರಿ ಸ್ಥಳದಲ್ಲಿ 7.80 ಮೀಟರ್ ಆಳಕ್ಕೆ ನೀರಿನ ಶೇಖರಣೆಯಿದ್ದು, ನದಿ ಪಾತ್ರದಲ್ಲಿನ ಬಾಕಿ ಕಾಮಗಾರಿಗಳನ್ನು ನೀರಿನ ಮಟ್ಟ ಕಡಿಮೆಯಾದ ನಂತರ ಕೈಗೊಳ್ಳಲು ಯೋಜಿಸಲಾಗಿರುತ್ತದೆ.<br><br>ಪ್ರಸ್ತುತ ಸೇತುವೆಯ ಒಟ್ಟು 15 ತಳಪಾಯಗಳ ಪೈಕಿ 12 ತಳಪಾಯಗಳು ಪೂರ್ಣಗೊಂಡಿದ್ದು, 15 ಸಬ್‌ಸ್ಟ್ರಕ್ಚರ್‌ಗಳ ಪೈಕಿ 7 ಸಬ್‌ಸ್ಟ್ರಕ್ಚರ್ ಪೂರ್ಣಗೊಂಡಿರುತ್ತವೆ. 14 ಅಂಕಣ ಸ್ಲ್ಯಾಬ್‌ಗಳ ಪೈಕಿ 4 ಅಂಕಣ ಸ್ಲ್ಯಾಬ್ ಪೂರ್ಣಗೊಂಡಿದ್ದು, ಭೂಸ್ವಾಧೀನಪಡಿಸಿಕೊಂಡ ಮಹಿಷವಾಡಗಿ ಕಡೆಯ ಭಾಗದಲ್ಲಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br><br>ಬದಲಾದ ವಿನ್ಯಾಸದಂತೆ ಹಾಗೂ ಸ್ಥಳದ ಅವಶ್ಯಕತೆಗೆ ಅನುಗುಣವಾಗಿ ಕಾಮಗಾರಿಯನ್ನು ಕೈಗೊಳ್ಳುವಲ್ಲಿ ಉಂಟಾಗುತ್ತಿರುವ ಪರಿಷ್ಕೃತ ಅಂದಾಜಿಗೆ ಸಹಮತಿ ಕೋರಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದ್ದು, ಪರಿಷ್ಕೃತ ಅಂದಾಜಿಗೆ ಅನುಮೋದನೆ ಪಡೆದು, ಕಾಮಗಾರಿಯ ಪ್ರಗತಿಗೆ ಅನುಗುಣವಾಗಿ ಹಣ ಬಿಡುಗಡೆಗೊಳಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ. |

| | | |
|---|---|---|
| ಈ) | ಕಾಮಗಾರಿ ವಿಳಂಬದಿಂದಾಗಿ ಆ ಭಾಗದ ರೈತರಿಗೆ ತೊಂದರೆಯಾಗಿ ಉಪವಾಸ ಸತ್ಯಾಗ್ರಹ, ಪ್ರತಿಭಟನೆ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ; ಹಾಗಿದ್ದಲ್ಲಿ, ಇಲ್ಲಿಯವರೆಗೆ ಕಾಮಗಾರಿ ಪ್ರಾರಂಭಿಸದೇ ಇರಲು ಕಾರಣಗಳೇನು; ಸೂಕ್ತ ಮಾಹಿತಿಯೊಂದಿಗೆ ವಿವರ ನೀಡುವುದು; | ಬಂದಿರುತ್ತದೆ.<br>ಪ್ರಸ್ತುತ, ಬಾಕಿ ಕಾಮಗಾರಿಗೆ ಅಗತ್ಯವಿರುವ ಭೂಮಿಯನ್ನು ಕರ್ನಾಟಕ ರಾಜ್ಯ ಹೆದ್ದಾರಿ ಕಾಯ್ದೆ ಅಡಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಪ್ರಕ್ರಿಯೆ ಕೈಗೊಂಡಿದ್ದು, ಮಹಿಷವಾಡಗಿ ಕಡೆಯ 29 ಸರ್ವೆ ನಂಬರ್‌ಗಳಲ್ಲಿ 21 ಸರ್ವೆ ನಂಬರ್‌ಗಳ ಭೂಮಾಲೀಕರಿಗೆ ಪರಿಹಾರ ವಿತರಿಸಲಾಗಿರುತ್ತದೆ. ಮದನಮಟ್ಟಿ ಕಡೆ ಭೂಮಾಲೀಕರಿಗೆ ಐತೀರ್ಪು ನೋಟೀಸ್‌ಗಳನ್ನು ಜಾರಿ ಮಾಡಲಾಗಿದ್ದು, ಭೂಪರಿಹಾರ ವಿತರಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಭೂಸ್ವಾಧೀನಕ್ಕೆ ಒಳಪಡುವ ಪ್ರದೇಶದಲ್ಲಿ ಕಾಮಗಾರಿಯ ಪೂರ್ವಭಾವಿಯಾಗಿ ಕೊಳವೆ ಮಾರ್ಗಗಳ ಸ್ಥಳಾಂತರ ಮತ್ತು ಮಾಲ್ಕಿ ಗಿಡ ಮರಗಳನ್ನು ತೆರವುಗೊಳಿಸಿದ್ದು, ಬಾಕಿ 3 ತಳಪಾಯ ಕಾಮಗಾರಿಗಳನ್ನು ದಿನಾಂಕ:04.02.2026 ರಿಂದ ಪುನರ್ ಪ್ರಾರಂಭಿಸಲಾಗಿರುತ್ತದೆ. ಪ್ರಸ್ತುತ ಕಾಮಗಾರಿ ಸ್ಥಳದಲ್ಲಿ ನೀರಿನ ಶೇಖರಣೆಯು 7.80 ಮೀಟರ್ ಇದ್ದು, ನದಿ ಪಾತ್ರದಲ್ಲಿನ ಬಾಕಿ ಕಾಮಗಾರಿಗಳನ್ನು ನೀರಿನ ಮಟ್ಟ ಕಡಿಮೆಯಾದ ನಂತರ ಕೈಗೊಳ್ಳಲಾಗುವುದು. |
| ಉ) | ಸದರಿ ಮಹೀಷವಾಡಗಿ ಸೇತುವೆ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? | ಸದರಿ ಸೇತುವೆ ನಿರ್ಮಾಣ ಕಾಮಗಾರಿಯನ್ನು ಡಿಸೆಂಬರ್–2026 ರೊಳಗಾಗಿ ಪೂರ್ಣಗೊಳಿಸಲು ಕ್ರಮವಹಿಸಲಾಗಿರುತ್ತದೆ. |

ಸಂಖ್ಯೆ: ಲೋಇ 69 ಇಎಪಿ 2026

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು